ಆದಾಯವೂ ಬಂತು. ಆದಾದ ಮೇಲೆ ಕೆರೆಗಳಿಗೆ ಮಳೆ ನೀರು ಬರದೆ ಬರಗಾಲ ಬಂದಿದ್ದರಿಂದ ಮುಂದಿನ ವರ್ಷವೂ ಅದಕ್ಕೆ ಕೊಡುತ್ತಿದ್ದೇವೆ. ಏನು ಈ ಪಾಶುವಾರು ಹಕ್ಕನ್ನು ಎಲ್ಲಾ ಜಿಲ್ಲೆಗಳಲ್ಲಿ ಒಂದೆ ರೀತಿಯಾಗಿ ತರಬೇಕೆಂದು ನೀವು ಹೇಳುತ್ತೀರಿ ಕೆಲವು ಸಂಘ ಸಂಸ್ಥೆಗಳಿಗೆ, ಅಥವಾ ಮೀನುಗಾರರು ಇರುವರಿತಹ ಜಾಗದಲ್ಲಿ ಹಕ್ಕನ್ನು ಕೊಡಬೇಕಾಗುತ್ತದೆ, ಆದುದರಿಂದ ಆ ಹಕ್ಕನ್ನು ಗುತ್ತಿಗೆಯ ಮೇಲೆ ಕೊಡುತ್ತಾರೆ, ಉಳಿದದ್ದನ್ನು ಹರಾಜಿನ ಮೂಲಕವೇ ಕೊಡುತ್ತೇವೆ. ಮಾನ್ಯ ಸದಸ್ಯರು ಮೀನು ಬೇಸಾಯಕ್ಕೆ ಸಂಬಂಧಿಸಿದಂತೆ ಟೆಕ್ನಾಲಜಿಯನ್ನು ಡೆವಲಪ್ ಮಾಡಿಲ್ಲವೆಂದು ಹೇಳುತ್ತಿದ್ದಾರೆ, ಈಗಾಗಲೇ ಅದಕ್ಕೆ ಬೇಕಾದಂತಹ ಎಲ್ಲಾ ಟೆಕ್ನಾಲಜಿ ಇದೆ, ಮೀನುಮರಿಗಳನ್ನು ತಂದು ಕೆರೆಗಳಿಗೆ ಬಿಟ್ಟು ಒಳ್ಳೆಯ ತಳಿಗಳನ್ನು ಉತ್ಪತ್ತಿ ಮಾಡುವುದಿದೆ, ಆದರೆ ದುರಾದೃಷ್ಟವಶಾತ್ ಮೂರು ವರ್ಷಗಳಿಂದ ಮಳೆ ಇಲ್ಲದೆ, ಕೆರೆಯಲ್ಲಿ ನೀರಿಲ್ಲ, ಮೀನು ನಾವು ಬಿಟ್ಟರೂ, ಅದು ಸಾಧ್ಯವಾಗುತ್ತಿಲ್ಲವೆಂದು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್. ನಿಂಗಪ್ಪ : ದಯವಿಟ್ಟು ಆ ಪ್ರಕ್ರಿಯೆಯನ್ನು ಬೇಗ ಪ್ರಾರಂಭ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ ಈ ಮೀನು ಸಾಗಾಣಿಕೆ ಹಾಗೂ ಹರಾಜು ಮಾಡುವ ವಿಚಾರದಲ್ಲಿ, ಈ ನೀರು ಬಳಕೆದಾರರ ಸಂಘಗಳನ್ನು ಸ್ಥಾಪನೆ ಮಾಡಿ ಅದರ ಮೂಲಕ ಮಾಡಬೇಕೆಂದಿದೆ. ನಮ್ಮ ಮೀನು ಕೃಷಿಕರ ಅಭಿವೃದ್ಧಿ ಸಂಘಗಳೇನಿವೆ. ಎಲ್ಲಾ ಟೆಂಡರ್ ಇತ್ಯಾದಿಗಳನ್ನು ಬೆಂಗಳೂರಿನಿಂದ ಮಾಡಿ, ಲೊಕಲ್ ಆಗಿ ಇರುವ ಗ್ರಾಮಪಂಚಾಯಿತಿಗಳಿಗೆ, ಗ್ರಾಮಸ್ಥರಿಗೆ ಬಹಳಷ್ಟು ಘರ್ಷಣೆಗಳು ಉಂಟಾಗಿವೆ. ಮೀನುಸಾಗಾಣಿಕೆ ಮಾಡುವುದನ್ನು ಗ್ರಾಮಾಪಂಚಾಯಿತಿ ಅಥವಾ ಅಲ್ಲಿಯ ಗ್ರಾಮಸ್ಥರಿಗೆ ಕೊಟ್ಟರೆ ಆಗ ಊರಿಗೂ ಕೂಡ ಆದಾಯವಾಗುತ್ತದೆ ನಮಗೆ ಮೀನಿನ ಮರಿಯನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಮೀನು ಕೃಷಿಕರ ಅಭಿವೃದ್ಧಿ ಬೆಂಗಳೂರಿನಲ್ಲೇ ಕುಳಿತುಕೊಂಡು ಟೆಂಡರ್ ಮಾಡಿ, ಯಾರೋ ಒಬ್ಬರ ಹೆಸರಿಗೆ ಎರಡು ಮೂರು ವರ್ಷ ನಿರಂತರವಾಗಿ ಕೊಟ್ಟು ಬಿಡುತ್ತಾರೆ. ವಿಶೇಷವಾಗಿ ನಮ್ಮ ಇನ್‌ಲ್ಯಾಂಡ್ ಪೀಷರೀಸ್ ಏನಿದೆ ಅದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಆದಾಯವಿದ್ದರೂ ಅಂತಿಮವಾಗಿ ಸರ್ಕಾರಕ್ಕೂ ಆದಾಯ ಬರುತ್ತಿಲ್ಲ, ಗ್ರಾಮಾಸ್ಥರಿಗೂ ಆದಾಯ ಬರುವುದಿಲ್ಲ. ಆದಷ್ಟು ಅಲ್ಲಿಯ ಗ್ರಾಮಪಂಚಾಯಿತಿಗಳಿಗೆ, ಗ್ರಾಮಸ್ಥರ ಸಮಿತಿಗಳಿಗೆ ಕೊಟ್ಟರೆ, ಇದರಿಂದ ಬರುವ ಆದಾಯ ದಿಂದ ಅವರಿಗೆ ಒಳ್ಳೆಯದಾಗುತ್ತದೆ ಗ್ರಾಮಸ್ಥರಿಗೂ ಆದಾಯ ಸಿಕ್ಕಿದ್ದಂತಾಗುತ್ತದೆ.

ಶ್ರೀ ಹೆಚ್. ನಿಂಗಪ್ಪ : ಈ ಪಾಶುವಾರು ಹಕ್ಕನ್ನು ಕೊಡುವಂತಹ ಸಂದರ್ಭದಲ್ಲಿ ಸ್ಥಳೀಯರಿಗೆ ಹಾಗೂ ಗ್ರಾಮಪಂಚಾಯಿತಿಗಳಿಗೆ ಆದ್ಯತೆಯನ್ನು ಕೊಟ್ಟರೆ ಒಳ್ಳೆಯದೇನ್ನುವುದು ನನ್ನ ಅನಿಸಿಕೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಕುಮಾರಬಂಗಾರಪ್ಪನವರು ಬಹಳ ಒಳ್ಳೆಯ ವಿಚಾರವನ್ನು ಎತ್ತಿದ್ದಾರೆ, ಅದನ್ನು ಸರ್ಕಾರ ಪರಿಶೀಲಿಸುತ್ತದೆ.

ರಾಜ್ಯದಲ್ಲಿನ ಯುವ ಡಾಟ್ ಕಾಂ ಯೋಜನೆಯ ಮೇಲ್ವಿಚಾರಣೆ ಬಗ್ಗೆ

125(494) ಶ್ರೀ ಕೃಷ್ಣ ಪಾಲೇಮಾರ್.ಜೆ (ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಯುವ ಡಾಟ್ ಕಾಂ ಯೋಜನೆ ಜಾರಿಗೆ ಬಂದ ನಂತರ ಒಟ್ಟು ಎಷ್ಟು ಜನ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ;

ಆ) ಅದಕ್ಕಾಗಿ ಖರ್ಚು ಮಾಡಿದ ಹಣದ ಮೊತ್ತವೆಷ್ಟು;

ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸದರಿ ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ತರಬೇತಿ ನೀಡಲಾಗಿದೆ;

ಈ) ಸುರತ್ಕಲ್ ಕ್ಷೇತ್ರದಲ್ಲಿ ಈ ಯೋಜನೆಯ ತರಬೇತಿ ಇದೆಯೇ;

ಉ) ಇಲ್ಲವಾದಲ್ಲಿ ಪ್ರಾರಂಭಿಸಲಾಗುವುದೇ;

ಊ) ಸದರಿ ಯೋಜನೆಯ ಮೇಲ್ವಿಚಾರಣೆ ಮಾಡಲು ರಚಿಸಿದ ಸಮಿತಿಗೆ ಯೋಜನೆ ಅನುಷ್ಠಾನದ ಕುರಿತು ದೂರುಗಳು ಬಂದಿವೆಯೇ;

ಋ) ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಕನಿಷ್ಟ ಎರಡು ಕೇಂದ್ರಗಳನ್ನು ತೆರೆದು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿ ಕೊಡಲಾಗುವುದೇ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಇಲ್ಲಿಯವರೆವಿಗೂ ರಾಜ್ಯದಲ್ಲಿ ಎಲ್ಲಾ ಯುವ. ಕಾಂ ಕೇಂದ್ರಗಳಿಂದ ಒಟ್ಟು 1,12,839 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.

ಆ) ರೂ. 1,26,18,895/–

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5,719 ಮತ್ತು ಉಡುಪಿ ಜಿಲ್ಲೆಯಲ್ಲಿ 1,689 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ.

ಈ) ಇದೆ.

ಉ) ಪ್ರಶ್ನೆ (ಈ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಊ) ಸರಕಾರಕ್ಕೆ ದೂರುಗಳು ಬಂದಿರುವುದಿಲ್ಲ.

ಋ) ಈಗಾಗಲೇ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಯುವ.ಕಾಂ ಕೇಂದ್ರಗಳಿದ್ದು ಬೇಡಿಕೆ ಬಂದಲ್ಲಿ ಮತ್ತು ಅಗತ್ಯವಾದಲ್ಲಿ ಶಾಖಾ ಕೇಂದ್ರವನ್ನು ತೆರೆಯಲು ಆಧ್ಯತೆ ನೀಡಲಾಗುವುದು.

ಶ್ರೀ ಜೆ. ಕೃಷ್ಣ ಪಾಲೇಮಾರ್ : ಮಾನ್ಯ ಅಧ್ಯಕ್ಷರೆ, ಈ ತರಬೇತಿ ಪಡೆದ ಯುವಕರಿಗೆ ಸರ್ಕಾರಿ ಮತ್ತು ಅರೆಸರ್ಕಾರಿ ಇಲಾಖೆಗಳಲ್ಲಿ ನೌಕರಿಯಲ್ಲಿ ಪ್ರಾಶಸ್ತ್ಯ ನೀಡಲಾಗುವುದೇ ಎರಡನೆಯದಾಗಿ ತರಬೇತಿ ಪಡೆದ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಾಯಧನದೊಂದಿಗೆ ಆರ್ಥಿಕ ಸೌಲಭ್ಯವನ್ನು ನೀಡಲಾಗುವುದೇ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ 200ನೇ ಇಸವಿಯಲ್ಲಿ ಈ ಬೇಸಿಕ್ ತರಬೇತಿಯನ್ನು ಸರ್ಕಾರ ತಂದಿತು, ತರಬೇತಿಯನ್ನು ಮೂರು ತಿಂಗಳಿನಿಂದ ಆರು ತಿಂಗಳವರೆಗೆ ಲೋಕಲ್ ಲೆವಲ್ ಎಂಪ್ಲಾಯ್‌ಮೆಂಟ್‌ಗೆ ಭೂಮಿ ಸ್ಕೀಂ ಇತ್ಯಾದಿಗೆಲ್ಲಾ ಕಂಪ್ಯೂಟರ್ ಸಿಸ್ಟಂ ಅನ್ನು ಅಳವಡಿಸುವುದಕ್ಕೆ ಅವರು ಇದನ್ನು ಕಲಿಯುವುದಕ್ಕೆ ಇದನ್ನು ನಾವು ತಂದಿದ್ದು. ಈಗಾಗಲೇ ರಾಜ್ಯದಲ್ಲಿ 234 ಕೇಂದ್ರಗಳು ರಾಜ್ಯದಲ್ಲಿ ನಡೆಯತ್ತಿದ್ದಾವೆ, ಇದಕ್ಕೆ ಇನ್‌ಫೋಸಿಸ್‌ನ ಅಧ್ಯಕ್ಷರಾದ ನಾರಾಯಣಮೂರ್ತಿಯವರು ಚೀಫ್ ಮೆಂಟರ್ ಆಗಿ ಮಾಡಿದ್ದೇವೆ. ನೀವು ಹೇಳಿದಹಾಗೆ ಕೇವಲ 3 ರಿಂದ 6 ತಿಂಗಳು ತರಬೇತಿ ಅದವರಿಗೆ ಅದು ಭೂಮಿ ಇಂತಹ ಸ್ಕೀಂಗಳಲ್ಲಿ ನಾವು ಕೆಲಸ ಕೊಡಲಿಕ್ಕೆ ಆಗುತ್ತಾ ಇಲ್ಲ. ಪ್ರೈವೇಟ್ ಸೆಕ್ಟಾರ್‌ನಲ್ಲಿ ಅವಕಾಶ ಇದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಅವರಿಗೆ ಅವಕಾಶ ಇಲ್ಲವೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.